C.C. 1768-22

ದಿನಾಂಕ 2 ನೇ ನವೆಂಬರ್ 2023 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಆರೋಪಿ ಪರ ವಕೀಲರಿಂದಃ-

ನಾನು ಮನೆಯಲ್ಲಿ ಇರುತ್ತೇನೆ. ಯಾವುದೇ ಕೆಲಸ ಮಾಡುವುದಿಲ್ಲ. ಆರೋಪಿ ನನಗೆ 6, 7 ವರ್ಷದಿಂದ ಪರಿಚಯ. ನಮ್ಮ ಮನೆಯಲ್ಲಿ ನಾನು ಪತ್ನಿ, 2 ಮಕ್ಕಳು ತಾಯಿ ಇದ್ದೇವೆ. ನನ್ನ ದೂರಿನಲ್ಲಿ ಏನು ಬರೆದಿದೆ ಎಂದು ನನಗೆ ತಿಳಿಯುತ್ತಿಲ್ಲ ನನಗೆಆಂಗ್ಲ ಭಾಷೆ ಓದಲು ಬರುವುದಿಲ್ಲ. 5 ವರ್ಷದಿಂದ ನನಗೆ ಕಿವಿ ಸರಿಯಾಗಿ ಕೇಳಿಸುತ್ತಿಲ್ಲ. ಶ್ರೀಮಂಗಲ ಪೊ. ಠಾಣೆಯಲ್ಲಿ ನನ್ನ ವಿರುದ್ಧ ಕ್ರಿಮಿನಲ್ ಪ್ರಕರಣದ ದಾಖಲಾಗಿದೆ ಎಂದರೆ ಸರಿ. ನಾನು ಸೇನೆಯವರು ಎಂದು ಹೇಳಿ ಒಬ್ಬ ಹುಡುಗನ ಬಳಿ ಹಣವನ್ನು ಪಡೆದು ಮೋಸ ಮಾಡಿದ್ದೇನೆ ಎಂದು ಪ್ರಕರಣ ದಾಖಲಾಗಿ, ಆ ಸಮಯದಲ್ಲಿ ಹುಡುಗರು ಹೊಡೆದು ನನ್ನ ಕಿವಿ ಕೇಳದೆ ಆಗಿದೆ ಎಂದರೆ ಸರಿಯಲ್ಲ.

ನನಗೆ ದೇವರು ಬರುತ್ತದೆ. ನನಗೆ Bar and resturant ನಡೆಸುವುದರಲ್ಲಿ 7, 8 ವರ್ಷದ ಅನುಭವ ಇದೆ ಎನ್ನುತ್ತಾರೆ . ನಾನು ಹರಿಶ್ಚಂದ್ರಪುರ ಬಾರ್ ನಲ್ಲಿ ಕೆಲಸ ಮಾಡುತ್ತಿದ್ದೆ. 2020-2021 ರಲ್ಲಿ ನಾನು ಹಾಗೂ ಆರೋಪಿ ಬಾರ್ ವ್ಯವಹಾರ ನಡೆಸಲು ಮಾತುಕತೆ ನಡೆಸಿದ್ದೆವು. ಕುಶಾಲನಗರದ ಶೋಭಾ ಬಾರ್ ಗೆ ಹತ್ತಿರ ಯಾವುದೇ ಕಟ್ಟಡ ಇಲ್ಲ. ಚಿಕ್ಕಮಂಗಳೂರಿಗೆ ಹೋಗುವ ರಸ್ತೆಯಲ್ಲಿ ಸದರಿ ಬಾರ್ ಇದೆ, ಅದು ಪಿರಿಯಾಪಟ್ಟಣದ ಹಳ್ಳಿಗೆ ಸೇರುವ ಜಾಗದಲ್ಲಿ ಇದೆ. ಹಳ್ಳಿಯ ಹೆಸರು ಗೊತ್ತಿಲ್ಲ.

ಈ ಹಂತದಲ್ಲಿ ಸಾಕ್ಷಿಯು ಕಿವಿ ಕೇಳುವುದಿಲ್ಲ ಎಂದು ಹೇಳಿದ್ದರಿಂದ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ಸಮಯವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿಬೆರಳಚ್ಚು ಮಾಡಿಸಲಾಗಿರುತ್ತದೆ)

ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

Sd/xxx-

(ಸಾಕ್ಷಿಯವರ ಸಹಿ)

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.